ಮಿಸೆಸ್ ಬ್ರಿಗ್ಸ್ ಅವನು ಹೇಳಿದಂತೆಯೇ ಮಾಡಿದಳು. ಸಿರಿಲ್ ಬೀರು ತೆರೆದ. ಏನೋ ಹೊರ ತೆಗೆಯುವ ಪರ ಪರ ಶಬ್ದ ಆಕೆಗೆ ಕೇಳಿಸಿತು.

"ಈಗ ನೀನು ಕಣ್ಣು ತೆರೆಯಬಹುದು ಡಾರ್ಲಿಂಗ್!" ಅವನು ಹೇಳಿದ.

"ನನಗೆ ಹೆದರಿಕೆಯಾಗುತ್ತಿದೆ ಡಿಯರ್!"

**"Oh, come on!"**

ಮಿಸೆಸ್ ಬ್ರಿಗ್ಸ್ ನಾಟಕೀಯವಾಗಿ ಒಂದು ಕಣ್ಣು ತೆರೆದಳು. ಸಿರಿಲ್ ಏನನ್ನೋ ಕೈಯಲ್ಲಿ ಎತ್ತಿ ಹಿಡಿದಿದ್ದು ಅವಳಿಗೆ ಅಸ್ಪಷ್ಟವಾಗಿ ಕಾಣಿಸಿತು.

"ಮಿಂಕ್ ಡಾರ್ಲಿಂಗ್, ಮಿಂಕ್! ನಕಲಿ ಮಿಂಕ್ ಅಲ್ಲ, ರಿಯಲ್ ಮಿಂಕ್!" ಸಿರಿಲ್ ಉತ್ತೇಜಿತನಾಗಿದ್ದ. ಮಿಂಕ್ ಶಬ್ದ ಕೇಳುತ್ತಿದ್ದಂತೆ ಮಿಸೆಸ್ ಬ್ರಿಗ್ಸ್ ಒಮ್ಮೆಲೆ ಎರಡೂ ಕಣ್ಣುಗಳನ್ನು ತೆರೆದು ಕರ್ನಲ್ ಸಾಹೇಬರು ಕೊಟ್ಟ ಕೋಟನ್ನು ಬಾಚಿ ತಬ್ಬಿಕೊಳ್ಳಲು ಎರಡೂ ಕೈಗಳನ್ನು ಅಗಲವಾಗಿ ತೆರೆದಳು. ಆದರೆ, ಆಕೆಯ ಕೈಗೆ ಸಿಕ್ಕಿದ್ದು ಕೋಟಲ್ಲ! ಕೊರಳಿಗೆ ಸುತ್ತುವ ಒಂದು ಜುಜುಬಿ ಮಿಂಕ್ ಕೊರಳ ಪಟ್ಟಿ!!

"ಇಂಥದ್ದನ್ನು ಕನಸಲ್ಲಾದರೂ ನೋಡಿದ್ಯಾ ಡಾರ್ಲಿಂಗ್?" ಲಂಗೋಟಿಯಂತಹ ಆ ಕೊರಳಪಟ್ಟಿಯನ್ನು ಸಿರಿಲ್ ಅವಳ ಕಣ್ಣ ಮುಂದೆ ಜಾದೂಗಾರನಂತೆ ಅಲುಗಾಡಿಸಿದ.

ಮಿಸೆಸ್ ಬ್ರಿಗ್ಸ್ ಬಾಯನ್ನು ಬಲವಾಗಿ ಅದುಮಿಡುತ್ತಾ ಒಳಗಿನಿಂದ ಗುದ್ದಿಕೊಂಡು ಹೊರಬರುತ್ತಿದ್ದ ಒಂದು ಭಯಂಕರ ನೋವಿನ ಚೀತ್ಕಾರವನ್ನು ಅಲ್ಲೇ ಜೀರ್ಣಿಸಿಕೊಂಡಳು!

"ಏನಾಯ್ತು ಡಾರ್ಲಿಂಗ್? ಈ ಮಿಂಕ್ ಕೊರಳಪಟ್ಟಿ ನಿನಗೆ ಇಷ್ಟವಾಗಲಿಲ್ಲವಾ?" ಸಿರಿಲ್ ಆತಂಕದಿಂದ ಕೇಳುತ್ತ ಅವಳನ್ನೇ ನೋಡತೊಡಗಿದ.

"ಹ್ಞಾ!?" ಚೇತರಿಸಿಕೊಳ್ಳುತ್ತಾ ಮಿಸೆಸ್ ಬ್ರಿಗ್ಸ್ ಉಲಿದಳು. "ಚೆನ್ನಾಗಿದೆ ಡಿಯರ್, ಚೆನ್ನಾಗಿದೆ. ಬ್ಯೂಟಿಫುಲ್!"

"ನಿನ್ನ ಮುಖಭಾವ ನೋಡಿಯೇ ಗೊತ್ತಾಯ್ತು ಡಾರ್ಲಿಂಗ್. ನಿನಗೆ ಶಾಕ್ ಆಯ್ತು ಅಲ್ವಾ?"

"ಹೌದು... ಹೌದು ಡಿಯರ್."

"ಇದು ಅಸಲಿ ಮಿಂಕ್ ಕೊರಳಪಟ್ಟಿ ಡಾರ್ಲಿಂಗ್. ಅಂಗಡೀಲಿ ಕೊಳ್ಳಲು ಹೋದರೆ ಇನ್ನೂರವೈತ್ತು ಮುನ್ನೂರು ಡಾಲರುಗಳಿಗೆ ಕಡಿಮೆ ಇಲ್ಲ."

"ಹೌದೌದು ಸಿರಿಲ್..."

"ಕೊರಳಿಗೊಮ್ಮೆ ಧರಿಸಿ ನೋಡು ಡಾರ್ಲಿಂಗ್" ಅವನು ಅದನ್ನು ಅವಳ ಕೊರಳಿಗೆ ತೊಡಿಸಿದ. ಸ್ವಲ್ಪ ಹಿಂದೆ ಸರಿದು ಎಂದ, "ಇದು ನಿನಗೆ ಚೆನ್ನಾಗಿ ಒಪ್ಪುತ್ತದೆ ಡಾರ್ಲಿಂಗ್. ಅಲ್ಲದೆ, ಅಸಲಿ ಮಿಂಕ್! ನೀನು ಶಾಪಿಂಗಿಗೆ ಹೋದಾಗ ಮಾತ್ರ ಹಾಕಿಕೊಳ್ಳಬೇಡ ಮಾರಾಯ್ತಿ! ನೀನು ಕೋಟ್ಯಧಿಪತಿಯ ಹೆಂಡತಿ ಎಂದು ಬಗೆದು ಬರೆ ಇಟ್ಟಾರು!"

"ಸರಿ ಡಾರ್ಲಿಂಗ್!" ಮಿಸೆಸ್ ಬ್ರಿಗ್ಸ್ ನಿಸ್ತೇಜವಾಗಿ ಉತ್ತರಿಸಿದಳು.

"ಮತ್ತೊಂದು ವಿಷಯ ಡಾರ್ಲಿಂಗ್. ಇದೇ ನಿನಗೆ ನನ್ನ ಕ್ರಿಸ್ಮಸ್ ಕಾಣಿಕೆ. ಅದು ಬೇಕು ಇದು ಬೇಕು ಎಂದು ಈ ವರ್ಷ ಕೇಳುವಂತಿಲ್ಲ! ಈ ಮಿಂಕ್ ಕೊರಳಪಟ್ಟಿಗೆ ನಾನು ಈಗಾಗಲೇ ಐವತ್ತು ಡಾಲರುಗಳನ್ನು ತೆತ್ತಿದ್ದೇನೆ!" ಇಷ್ಟು ಹೇಳಿ ಸಿರಿಲ್ ವಾಷ್ ಬೇಸಿನ ಬಳಿ ಹೋಗಿ ಕೈಗಳನ್ನು ತೊಳೆಯತೊಡಗಿದ.

"ಡಾರ್ಲಿಂಗ್, ಸಾರಿ. ಇವತ್ತು ನಿಂಜೊತೆ ಸ್ಯಾಂಡ್ವಿಚ್ ತಿನ್ನೋ ಅದೃಷ್ಟವಿಲ್ಲ. ಹೊರಗಡೆ ನೋಡು. ಆ ಶನಿ ಮಿಸ್ಟರ್ ಮೋರ್ಗನ್ ವಕ್ಕರಿಸಿಕೊಂಡಿದ್ದಾನೆ! ಅವನ ಹಲ್ಲಿನ ಸೆಟ್ಟಿನ ಕ್ಲಿಪ್ಪು ಮುರಿದು